**(ಇಂದು ದಿನಾಂಕಃ 19-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಪ್ರತಿವಾದಿ ಪರ ಎ ಜಿ ಪಿ ರವರಿಂದಃ**

ವಾದಿ ನನ್ನ ಮಗ. ನಾನು ಇಂಜಿನಿಯರಿಂಗ್ ಮಾಡಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ದಾವಾ ದಾಖಲು ಮಾಡಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಈ ಪ್ರಕರಣವನ್ನು ನಾನು ದಾಖಲು ಮಾಡಿಲ್ಲ, ಬೇರೆಯವರು ದಾಖಲು ಮಾಡಿರುತ್ತಾರೆ. ದಾವಾ ಆಸ್ತಿಯ ಸ ನಂ.1/4 ಆಗಿರುತ್ತದೆ, ಈಗ 1/8 ಆಗಿರುತ್ತದೆ. ಸದರಿ ಆಸ್ತಿ 01 ಎಕರೆ 10 ಗುಂಟೆ ಇರುತ್ತದೆ. ಸದರಿ ಸರ್ವೆ ನಂಬರ್ ಆಸ್ತಿಯ ಚಕ್ಕುಬಂದಿ ಪೂಃ ಮುಜೀಬ್ ರೆಹಮಾನ್ ರವರ ತೋಟ, ಪಃಉಃ ನನ್ನ ಸ್ವಂತ ಜಮೀನು, ದಃ ರಿಜ್ವಾನ್ ರವರ ತೋಟ ಇರುತ್ತದೆ. ದಾವಾ ಅಸ್ತಿಯನ್ನು ದಃ 21-03-2009 ರಂದು ನಾವು ರಿಹಾನ ಪರ್ವೀನ್ ರವರಿಂದ ಖರೀದಿ ಮಾಡಿರುತ್ತೇವೆ. ಸದರಿ ಆಸ್ತಿಯು ಅವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನಾನು 03 ಎಕರೆ 30 ಗುಂಟೆ ಆಸ್ತಿಯನ್ನು ಕ್ರಯಕ್ಕೆ ಪಡೆದಿರುತ್ತೇನೆ. ಅದನ್ನು ನಾನು ನನ್ನ ವಾದಪತ್ರದಲ್ಲಿ ಹೇಳಿರುತ್ತೇನೆ. ವಾದಿಗೆ ಈಗ 40 ವರ್ಷ ವಯಸ್ಸಾಗಿರುತ್ತದೆ. ಅವರ ಪರವಾಗಿ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಅನುಮತಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಜಿ ಪಿ ಎ ಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಜಿ ಪಿ ಎ ಹಾಜರುಪಡಿಸದ ಕಾರಣ ವಾದಿ ಪರ ಸಾಕ್ಷಿ ಹೇಳಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**